"The Karnataka Inams Abolition Laws (Amendment) Bill 1987".

MR. SPEAKER.—The Bill is introduced.

THE KARNATAKA LAND REVENUE (SECOND AMENDMENT) BILL, 1986.

Motion for extension of time for the presentation of Report of Joint Select Committee.

SRI A. LAKSHMISAGAR (Minister for Urban Development, law and Parliamentary Affairs) (On behalf of Minister for Revenue, Planning and Labour).—Sir I beg to move :

"That the time for she presentation of the Joint Select Committee on Karnataka Land Revenue (Second Amendment) Bill, 1986 be extended upto 22th April, 1987".

MR. SPEAKER.—The question is :

"That the time for the presentation of the Joint Select Committee on Karnataka Land Revenue (Second Amendment) Bill, 1986 be extended upto 29th April, 1987".

The Motion was adopted and the time was extended

THE KARNATAKA INAMS ABOLITION LAWS (AMENDMENT) BILL, 1987

Motion for conside ation

SRI A. LAKSHMISAGAR (Minister for Law & Paalv. Affairs On behalf of Minister for Revenue).—Sir, I beg to move :

"That the Karnataka Inams Abolition Laws (Amendment) Bill, 1987 be taken into consideration".

Thd question was proposed

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ಸಮಯ ವಿಸ್ತರಣೆ ಮಾಡುವುದಕ್ಕೋಸ್ಕರವಾಗಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಹಿಂದೆ ಮಾನ್ಯ ಬಂಗಾರಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗಲೂ ಕೂಡ ಕೇಳಿದ್ದರು. ಈಗಲೂ ಸಮಯ ವಿಸ್ತರಣೆಗಾಗಿ ಸೊಂಡೂರು ಮತ್ತು ಕೊಳ್ಳೇಗಾಲ ಏರಿಯಾದಿಂದ ರೆಪ್ರಸೆಂಟೇಷನ್‌ಗಳು ಬಂದಿರುತ್ತವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ಕೃಷಿ ಕಾರ್ಮಿಕರಿಗೆ ಇದು ಸಂಬಂಧಿಸುವುದಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಕೃಷಿ ಕಾರ್ಮಿಕರು ೭೫ ಪರ್ಸೆಂಟ್ ಡಿಕ್ಲರೇಷನ್ ಕೊಟ್ಟಿಲ್ಲ. ಆದ್ದರಿಂದ ಕೃಷಿ ಕಾರ್ಮಿಕರಿಗೆ ಈ ನಿಯಮ ಯಾವರೀತಿ ಬರುತ್ತದೆ. ಇದು ಇನ್ನೂ ಕೆಳ ಹಂತದಲ್ಲಿಯೇ ಇದೆ. ಲ್ಯಾಂಡ್ ರಿಫಾರ್ಮ್ ೨೨ ಆಕ್ಟ್ ಪ್ರಕಾರ ಡಿಕ್ಲರೇಷನ್‌ಗೆ ಅವಕಾಶ ಕೊಟ್ಟಹಾಗೆ ಇದಕ್ಕೂ ತಿದ್ದುಪಡಿ ತಂದಿದ್ದರೆ ಬಹಳವಾಗಿ ಸ್ವಾಗತ ಮಾಡಬಹುದಾಗಿತ್ತು. ಹೆಚ್ಚು ಪ್ರಗತಿಪರವಾಗುತ್ತಿತ್ತು. ಆದನ್ನು ನಾವು ಬಹಳವಾಗಿ ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ತಿದ್ದುಪಡಿ ಮಸೂದೆ ಇದೆ.

SRI M. VEERAPPA MOILY.—I am telling about agricultural labourers-

SRI A. LAKSHMISAGAR.—I will convey your feelings to the hon. minister for Revenue. I will request him to consider.

ಶ್ರೀ ಎಂ. ವೀರಪ್ಪಮೊಯಿಲಿ.—ರ್ಯಾಡಿಕಲ್ ಆಗಿ ಪ್ರೋಗ್ರೆಸೀವ್ ಆಗಿ ಆಗಬೇಕಾಗಿದೆ. ಅದನ್ನೂ ಮಾಡಿ. ಅದನ್ನು ಮರೆಯಬೇಡಿ ಎಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಇದನ್ನು ಎಕ್ಸ್‌ಟೆಂಡ್ ಮಾಡುತ್ತಿರುವುದು ಎರಡನೆಯ ಸಲ. There are Acts, *viz*., The Tysore (Religious and Charitable) Inams Abolition Act, 1955, The Karnataka (Sandur Area) Inams Abolition Act, 1976 and the Karnataka Certain Inams Abolition Act, 1977. ಏನಾಗುತ್ತದೆಯೆಂದರೆ ಕೆಲವು ಕಡೆ ಪುನಃ ತಿದ್ದುಪಡಿ ಮಾಡಿ ಫಾಲ್ಸ್ ಟಿನೆಂಟ್ ಕ್ರಿಯೇಟ್ ಮಾಡುತ್ತಾರೆ. ಆದ್ದರಿಂದ ಒಂದು ಡೆಫಿನೆಟ್ ಡೇಟ್ ಕೊಟ್ಟು ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರಿಗೆ ಒಂದು ಟಾರ್ಗೆಟ್ ಫಿಕ್ಸ್ ಮಾಡಿ. ಎಲ್ಲೆಲ್ಲಿ ಇಂಥ ಟಿನೆಂಟ್ ಇರುತ್ತಾರೆ ಅಂಥಕಡೆ ನಿಮ್ಮ ರೆಕಾರ್ಡ್ ನೋಡಿಕೊಂಡರೆ ಗೊತ್ತಾಗತ್ತದೆ. ಫಾರಮ್ ಫಿಲಪ್ ಮಾಡಬೇಕಾದರೆ ಅದನ್ನು ತರಿಸಿಕೊಡಬೇಕಾಗುತ್ತದೆ. ನಿಮ್ಮ ಡಿಪಾರ್ಟ್‌ಮೆಂಟಿನವರೇ ಅಪ್ಲಿಕೇಷನ್ಸ್ ಕಲೆಕ್ಟ್ ಮಾಡಬಹುದು. ನಿಮ್ಮ ವಿಲೇಜ್ ಅಕೌಂಟೆಂಟೋ ಅಥವಾ ತಹಶೀಲ್‌ದಾರರೋ ಅಪ್ಲಿಕೇಷನ್ ಕೊಡಿ ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದರೆ ಜನರಿಗೆ ಅರ್ಥವಾಗುತ್ತದೆ. ಇದು ಕೇವಲ ಸೀಮಿತ ವಾಗಿರುವುದರಿಂದ ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಅಪ್ಲಿಕೇಷನ್ ಕಲೆಕ್ಟ್ ಮಾಡಲು ಡೈರೆಕ್ಷನ್ ಕೊಡಬೇಕು. ರೆವಿನ್ಯೂ ರೆಕಾರ್ಡ ಪ್ರಕಾರ ಯಾವ ಯಾವ ಕ್ಲೈಮ್‌ನಲ್ಲಿ ಬರುತ್ತದೆ ಅದರ ಪ್ರಕಾರ ಅಪ್ಲಿಕೇಷನ್ ತೆಗೆದುಕೊಂಡು ಡಿಸ್‌ಪ್ಯೋಸ್ ಮಾಡುವಂತಾಗಬೇಕು. ಅವರಿಗೆ ಒಂದು ಟಾರ್ಗೆಟ್ ಫಿಕ್ಸ್ ಮಾಡಬೇಕು. ಆರು ತಿಂಗಳೋ ಮೂರು ತಿಂಗಳೋ ಟೈಮ್ ಕೊಟ್ಟು ಆ ಟೈಮಿನಲ್ಲಿ ಡಿಸ್‌ಪೋಸ್ ಮಾಡಬೇಕೆಂದು ಆದೇಶವನ್ನು ಕೊಟ್ಟರೆ ಒಳ್ಳೆಯದಾಗುತ್ತದೆ. ಅದಕ್ಕಾಗಿ ತಮ್ಮಲ್ಲಿ ಅಪ್ಲಿಕೇಷನ್ಸ್ ಎಷ್ಟು ಇದೆ, ಆಕ್ಟ್ ಪ್ರಕಾರ ಎಷ್ಟು ಅಗ್ಲಕೇಷನ್ಸ್ ಬರಬಹುದು ಎನ್ನುವ ಬಗ್ಗೆ ಅಂದಾಜಿದ್ದರೆ ಅದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್. (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಹೇಳಿರತಕ್ಕಂಥ ಮಾತನ್ನು ನಾನು ಬೆಂಬಲಿಸಿ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಇದರ ಉದ್ದೇಶ ಇರತಕ್ಕಂಥದ್ದು ಯಾರು ನಿಜವಾಗಿ ಸಾಗುವಳಿ ಮಾಡುತ್ತಿರುತ್ತಾರೆಯೋ ಅವರಿಗೆ ಅನುಕೂಲವಾಗುವುದಕ್ಕೋಸ್ಕರವಾಗಿ. ಅವರಲ್ಲಿ ಕೆಲವರು ಸಕಾಲದಲ್ಲಿ ಅರ್ಜಿ ಹಾಕಲಿಲ್ಲ ಎನ್ನುವ ಕಾರಣಕ್ಕಾಗಿ ಅವರಿಗೆ ಸಿಕ್ಕಬೇಕಾದ ಹಳ್ಳು ಸಿಕ್ಕದೆ ಅನಾನುಕೂಲ ಆಗಬಾರದು ಎನ್ನುವ ಉದ್ದೇಶ ಇನ್ನು ಇರುತ್ತದೆ ಅದು ಬಹಳ ಉದ್ದೇಶ. ಆದರೆ ಅರ್ಜಿ ಹಾಕುವುದಕ್ಕೆ ಪದೇ ಪದೇ ಸಮಯವನ್ನು ವಿಸ್ತರಿಸಿಕೊಂಡು ಹೋಗಂವುದರಿಂದ ಅವರ ಹೆಸರಿನಲ್ಲಿ ಅರ್ಜಿಯನ್ನು ಸಕಾಲದಲ್ಲಿ ಹಾಕಲಿಲ್ಲವೆಂದು ಬಂದರೂ, ಹಲವಾರು ಸಂದರ್ಭದಲ್ಲಿ ಗೊತ್ತಾಗುವುದಿಲ್ಲವೆಂದು ಅವರ ಕ್ಲೈಮನ್ನು ಕೈಬಿಡುತ್ತೀರಾ ? ಅವರಿವರ ಹೆಸರಿನಲ್ಲಿ ಅರ್ಜಿ ಸೃಷ್ಟಿ ಮಾಡತಕ್ಕದ್ದು ಎಲ್ಲ ಕಾನೂನಿನ ಆಡಿಯಲ್ಲಿ ನಡೆಯುತಿರತಕ್ಕ ವ್ಯವಹಾರ. ಆದ್ದರಿಂದ ನಾವು ಒಂದು ರೀತಿಯ ಕರುಣಾತನದಿಂದ, ಯಾರಿಗೋ ಅನುಕೂಲ ಮಾಡುತ್ತಿದ್ದೇವೆಂದು ತಿಳಿದುಕೊಂಡು ಮಾಡತಕ್ಕ ಕೆಲಸ ಕೊನೆಗೆ ಅಂತಿಮ ಪರಿಣಾಮದಲ್ಲಿ. ಯಾರಿಗೆ ಅದರ ಒಂದು ಉಪಯೋಗ ಸಿಗಬಾರದಿತ್ತು ಅಂಥ ಜನಗಳಿಗೆ ಉಪಕಾರ ಮಾಡುವುದಕ್ಕೋಸ್ಕರ ನಮ್ಮ ಶಕ್ತಿಯನ್ನು ಒದಗಿಸಿಕೊಟ್ಟಂತಾಗುತ್ತದೆ. ಒಂದು ದೃಷ್ಟಿಯಿಂದ ಸಮಯವನ್ನು ವಿಸ್ತಾರ ಮಾಡಬೇಕಾದರೆ ಸರ್ಕಾರಕ್ಕೆ ಒಂದು ಖಚಿತವಾದ ಪರದಿ ಬೇಕು. ಸಾಧಾರಣ ವಾಗಿ ಎಷ್ಟು ಜನ ಬಿಕ್ಕಂಪೆಟೆಂಟ್ಸ್ ಇದ್ದರು, ಎಷ್ಟು ಜನ ಅರ್ಜಿ ಹಾಕಿದ್ದರು, ಎಷ್ಟು ಜನ ಅರ್ಜಿ ಹಾಕಿಲ್ಲ, ಅರ್ಜಿ ಹಾಕದೆ ಇರುವುದಕ್ಕೆ ಇಜವಾದ ಕಾರಣವೇನು ? ಗೊತ್ತಾಗಲಿಲ್ಲ, ಹಾಕಲಿಲ್ಲವೆಂದರೆ ಅದಕ್ಕೆ ಅರ್ಥವಿಲ್ಲ. ಸಮಯವನ್ನು ವಿಸ್ತರಣೆ ಮಾಡುವುದರಿಂದ ಅವರಿಗೆ ಬೆನಿಫಿಟ್ ಹೋಗುತ್ತದೋ ಇಲ್ಲವೋ ಎಂಬುದನ್ನು ವಿಚಾರ ಮಾಡದೆ ಅರ್ಜಿ ಬಂತು, ಇಂತಿಷ್ಟು ಜನರಿದ್ದಾರೆ, ಅವಧಿ ರಸ್ತರಿಸುತ್ತಾ ಹೋಗುತ್ತೇವೆಂದರೆ ಎಲ್ಲಾ ಕಾನೂನುಗಳು ಕಡತದಲ್ಲಿ ಉಳಿದು ಅಂತಿಮ ರೂಪ ತಳೆಯದೆ ಇರುವುದಕ್ಕೆ ಕಾರಣವಾಗುತ್ತದೆ. ಆ ದೃಷ್ಟಿಯಿಂದ ವಿಸ್ತರಣೆ ಮಾಡುವುದಿದ್ದರೆ ವೈಜ್ಞಾನಿಕ ಸಮೀಕ್ಷೆ ಆಧಾರದ ಮೇಲೆ ಮಾಡಬೇಕೇ ಹೊರತು ಅರ್ಜಿಗಳು ಬರುತ್ತವೆಂದು ಮಾಡುವುದಿಲ್ಲ. ಬರತಕ್ಕ ಅರ್ಜಿಗಳು

ನಿಜವೋ, ಬೇನಾಮಿಯೋ ಎಂಬುದನ್ನು ಪರಿಶೀಲನೆ ಮಾಡದೆ ತಕ್ಷಣ ಅನುಕೂಲ ಮಾಡುತ್ತಿದ್ದೇವೆಂಬ ಧೋರಣೆಯಿಂದ ಮಾಡತಕ್ಕದ್ದಲ್ಲ. ಆ ದೃಷ್ಟಿಯಿಂದ ಸರ್ಕಾರ ವಿಚಾರ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಕೋಲಾರ).—ಮಾನ್ಯ ಅಧ್ಯಕ್ಷರೆ, ಈಗಾಗಲೇ ಎರಡು ಸಾರಿ ಅವಧಿಯನ್ನು ವಿಸ್ತರಣೆ ಮಾಡಿದ್ದಾರೆ. ಈಗಲೂ ಸಾವಿರಾರು ಜನ ಮೈಸೂರು ರಿಲಿಜಿಯಸ್ ಚಾರಿಟಬಲ್ ಆಕ್ಟ್ ಮತ್ತು ಕರ್ನಾಟಕ ಇನಾಮ್ಸ್ ಅಬಾಲಿಷನ್ ಆಕ್ಟ್‌ನ ವ್ಯಾಪ್ತಿಗೆ ಬರುತ್ತಾರೆ. ಅಪ್ಲಿಕೇಷನ್ ತೆಗೆದುಕೊಳ್ಳುತ್ತೇವೆಂಬ ವಿಷಯವನ್ನು ಜಾಸ್ತಿ ಪಬ್ಲಿಸಿಟಿ ಕೊಟ್ಟರೆ ಒಳ್ಳೆಯದು. ಮೊದಲು ಕಾನೂನುಗಳು ಬಂದಾಗ ಸಾಕಷ್ಟು ಹ್ಯಾಂಡ್ ಬಿಲ್ಸ್ ಅನ್ನು ಪ್ರಿಂಟ್ ಮಾಡಿ ಕೊಡುತ್ತಿದ್ದರು. ಬೇಕಾದಷ್ಟು ಜನ ಅರ್ಜಿ ಹಾಕುವವರು ಇದ್ದರೂ ಸಾಕಷ್ಟು ಪ್ರಚಾರ ಸಿಕ್ಕದೆ ಅರ್ಜಿ ಹಾಕಿಲ್ಲ. ಆದ್ದರಿಂದ ಸರ್ಕಾರ ಏನು ಮಾಡಬೇಕೆಂದರೆ ೩೦-೬-೮೭ರವರೆಗೆ ಅವಧಿಯನ್ನು ವಿಸ್ತರಣೆ ಮಾಡಿದ್ದೇವೆಂದು ಸಾಕಷ್ಟು ಪ್ರಚಾರ ಕೊಡಬೇಕು. ಜೆನ್ಯುಯಿನ್ ಅಪ್ಲಿಕೆಂಟ್ಸ್ ಇದ್ದರೆ ಅರ್ಜಿ ಹಾಕಬಹುದೆಂದು ತಹಶೀಲ್ದಾರರು ಪ್ರಚುರ ಪಡಿಸಬೇಕು. ವಿಲೇಜ್ ಅಕೌಂಟೆಂಟ್ಸ್ ಮತ್ತಿತರ ಯಾವ ಯಾವ ಮೂಲಗಳಿವೆ ಆ ಮೂಲಕ ಪ್ರಚಾರ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಹಾಗೆ ಉಳಿಯುತ್ತದೆ. ಸುಮ್ಮನೆ ಎಕ್ಸ್‌ಟೆಂಡ್ ಮಾಡಿದ್ದೇವೆಂದು ಹೇಳುವುದು ಒಳ್ಳೆಯದಲ್ಲ. ತಹಶೀಲ್ದಾರರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರಚಾರ ಮಾಡುವುದಕ್ಕೆ ಡೈರೆಕ್ಷನ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಇನಾಂ ಅಬಾಲಿಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ಬಿಲ್ ಏನು ತಂದಿದ್ದಾರೆ ಇದರಲ್ಲಿ ಮುಖ್ಯವಾಗಿ ಮೈಸೂರು ರಿಲಿಜಿಯಸ್, ಕರ್ನಾಟಕ ಸಂಡೂರು ಏರಿಯ ಅಬಾಲಿಷನ್ ಆಕ್ಟ್ ಬರುತ್ತದೆ. ಇದು ನನ್ನ ಕ್ಷೇತ್ರಕ್ಕೆ ಸಂಬಂಧ ಪಟ್ಟದ್ದು. ಈ ಬಿಲ್ಲನ್ನು ತಂದಿರತಕ್ಕ ಉದ್ದೇಶ ಒಳ್ಳೆಯದು. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದರಲ್ಲಿ ಮುಖ್ಯವಾಗಿ ಏನು ಮಾಡಬೇಕಾಗಿದೆ ಎಂದರೆ ೨-೩ ಸಾರಿ ಸಮಯವನ್ನು ವಿಸ್ತರಣೆ ಮಾಡುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಮಂತ್ರಿಗಳು ಹೇಳಿದರು, ರೆಪ್ರಸೆಂಟೇಷನ್ಸ್ ಬಹಳ ಬಂದಿವೆ, ಜನರಿಗೆ ಗೊತ್ತಿಲ್ಲದಿರುವುದರಿಂದ ಅರ್ಜಿ ಹಾಕಿಲ್ಲ, ಸಮಯವನ್ನು ಕೊಡಿ ಎಂದು ಕೇಳಿದ್ದಾರೆ ಎಂದು. ಸರ್ಕಾರದಲ್ಲಿ ಕರ್ನಾಟಕದ ಯಾವ್ಯಾವ ಏರಿಯಾದಲ್ಲಿ ಎಷ್ಟೆಷ್ಟು ಇನಾಂ ಲ್ಯಾಂಡ್ಸ್ ಇದೆ ಎಂಬ ದಾಖಲೆ ಇದೆ. ಉದಾಹರಣೆಗೆ ಹೇಳುತ್ತೇನೆ, ಸಂಡೂರು ಏರಿಯದಲ್ಲಿ ೨ ಸಾವಿರ ಎಕರೆ ಇನಾಂ ಭೂಮಿ ಇದೆ ಎಂದು ಗೊತ್ತಾದ ಮೇಲೆ ಅದು ಯಾರ ಸ್ವಾಧೀನದಲ್ಲಿದೆ, ಯಾರು ಕಲ್ಟಿವೇಟ್ ಮಾಡುತ್ತಿದ್ದಾರೆ, ಅವರು ಎಷ್ಟು ವರ್ಷದಿಂದ ಮಾಡುತ್ತಿದ್ದಾರೆ ಎಂಬ ವಿವರವನ್ನು ಸಂಗ್ರಹಿಸುವುದಕ್ಕೆ ಅಲ್ಲಿರತಕ್ಕ ರೆವಿನ್ಯೂ ಅಧಿಕಾರಿಗಳಿಗೆ, ವಿಲೇಜ್ ಅಕೌಂಟೆಂಟರಿಗೆ ಸೂಚನೆ ನೀಡಿದರೆ ಮಾಡುತ್ತಾರೆ. ಆ ಮಾಹಿತಿಯನ್ನು ಸಂಗ್ರಹಿಸಿ ಪಾರ್ಟಿಗಳು ಯಾರಿದ್ದಾರೆ ಅವರಿಗೆ ಅರ್ಜಿ ಹಾಕಿ ಎಂದರೆ ಹಾಕುತ್ತಾರೆ. ಪದೇ ಪದೇ ಏತಕ್ಕೆ ಸಮಸ್ಯೆ ಬರುತ್ತಿದೆ ಎಂದರೆ ಸರ್ಕಾರಿ ಯಂತ್ರ ವೈಜ್ಞಾನಿಕ ದೃಷ್ಟಿಕೋನವನ್ನಿಟ್ಟುಕೊಂಡು ಸರಿಯಾಗಿ ಕೆಲಸ ಮಾಡದೆ ಇರುವುದರಿಂದ ಸಮಯ ವಿಸ್ತರಣೆ ಮಾಡತಕ್ಕ ಸಂದರ್ಭ ಪದೇ ಪದೇ ಬರುತ್ತಿದೆ. ಆದಕಾರಣ ಇನ್ನು ಮೇಲೆ ಈ ಕೆಲಸಕ್ಕೆ ಸ್ಥಳೀಯವಾಗಿ ಯಾರು ಅಧಿಕಾರಿಗಳಿರುತ್ತಾರೆ, ವಿಲೇಜ್ ಅಕೌಂಟೆಂಟಾಗಲಿ ರೆವಿನ್ಯೂ ಇನ್‌ಸ್ಪೆಕ್ಟರಾಗಲಿ ತಹಸೀಲ್ದಾರರಾಗಲೀ ಅವರನ್ನು ಜವಾಬ್ದಾರರನ್ನಾಗಿ ಮಾಡಬೇಕು. ಇನಾಂ ಅಬಾಲಿಷನ್ ಆಕ್ಟ್ ಕೆಳಗೆ ಯಾರಾದರೂ ಅರ್ಜಿ ಹಾಕಲಿಲ್ಲ ಎಂದು ಕಂಪ್ಲೇಂಟ್ ಬಂದರೆ ಸ್ಥಳೀಯ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಆಗ ಅವರು ಜನರನ್ನು, ಕಲ್ಟಿವೇಟರ್‌ಗಳನ್ನು ಕರೆಸಿ ಅರ್ಜಿ ಹಾಕಿಸುತ್ತಾರೆ. ಇಲ್ಲದಿದ್ದರೆ ಮಧ್ಯವರ್ತಿಗಳು, ರಾಜಕೀಯ ಪ್ರಭಾವ ಇರತಕ್ಕವರು, ಪಟ್ಟಭದ್ರ ಹಿತಾಸಕ್ತಿಗಳು ಯಾರಿರುತ್ತಾರೆ. ಅವರು ದುರುಪಯೋಗ ಪಡಿಸಿಕೊಳ್ಳುತ್ತಾರೆ ಕಲ್ಟಿವೇಟರ್‌ಗೆ ಗೊತ್ತೇ ಇರುವುದಿಲ್ಲ. ಒಬ್ಬ ಕೂಲಿಗಾರ, ಬ್ಯಾಕ್‌ವರ್ಡ್ ಕ್ಲಾಸ್ ಅಥವಾ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಸಾಗುವಳಿ ಮಾಡುತ್ತಿದ್ದರೆ ಅವನು ಎನು ತಿಳಿದುಕೊಂಡಿರುತ್ತಾನೆಂದರೆ ಆ ಭೂಮಿ ಗೌಡರದ್ದೋ ಶಾನುಭೋಗರದ್ದೋ ಎಂದು ತಿಳಿದು ಕೊಂಡಿರುತ್ತಾನೆ. ಅದು ಇನಾಂ ಭೂಮಿ ಎಂದು ಗೊತ್ತೇ ಇರುವುದಿಲ್ಲ. ಅವನ ಅಜ್ಞಾನವನ್ನು ದುರುಪಯೋಗ ಪಡಿಸಿಕೊಂಡು ರೆಕಾರ್ಡ್ ಬಿಲ್ಡಪ್ ಮಾಡಿಸಿ ಸಾಕ್ಷಿ ಹೇಳಿಸಿ ಪ್ರಭಾವಶಾಲಿ ವ್ಯಕ್ತಿಗಳು ಜಮೀನು ಪಡೆಯತಕ್ಕ ಸಂದರ್ಭಗಳು ಹೆಚ್ಚಾಗಿರುತ್ತವೆ. ಆದ್ದರಿಂದ ಇವತ್ತು ಏನು ಬಿಲ್ ತಂದಿದ್ದೀರಿ ಇದನ್ನು ಸ್ವಾಗತ ಮಾಡುತ್ತೆ ನೆ. ಇನಾಂ ಅಬಾಲಿಷನ್ ಆಕ್ಟ್ ಕೆಳಗೆ ಬರತಕ್ಕ ಎಲ್ಲ ಭೂಮಿ ಸಾಗುವಳಿದಾರರಿಗೆ

ನ್ಯಾಯಯುತವಾಗಿ ಮುಟ್ಟಬೇಕು, ಸರ್ಕಾರಿ ಯಂತ್ರ ಹಿಂದೆ ಏನು ಸರಿಯಾಗಿ ಕೆಲಸ ಮಾಡಿಲ್ಲವೋ ಆದೆ ರಿಪೀಟ್ ಆಗದೇ ಇರುವ ರೀತಿಯಲ್ಲಿ ಮಾಡಬೇಕು. ಸ್ಥಳೀಯ ಅಧಿಕಾರಿಗಳನ್ನು ಇದಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು. ಸಾಗುವಳಿದಾರರಿಗೆ ಏನು ಸೌಲಭ್ಯ ಸಿಗಬೇಕೋ ಆದು ಸಿಗದಿದ್ದರೆ ಆ ಪ್ರದೇಶದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ನಿರ್ದೇಶನವನ್ನು ಸರ್ಕಾರ ಕಳುಹಿಸಿದರೆ ಈ ಬಿಲ್ ಹೆಚ್ಚು ಸಫಲವಾಗುತ್ತದೆ. ಇಲ್ಲದಿದ್ದರೆ ಆಗಬಹುದಿಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಆಹಾರ ಮತ್ತು ಸಂಸದೀಯ ವ್ಯವಹಾರ ಹಾಗೂ ನಗರಾಭಿವೃದ್ಧಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಅರ್ಜಿ ಹಾಕುವುದಕ್ಕೆ ಮೂರು ಕಾನೂನುಗಳ ಅಡಿಯಲ್ಲಿ ಜಮೀನು ಸಾಗುವಳಿ ಮಾಡತಕ್ಕವರು ತಮ್ಮ ಹೆಸರಿಗೆ ಜಮೀನನು ಮಾಡಿಕೊಳ್ಳುವುದ ಕ್ಕೋಸ್ಕರ ಕಾಲ ಮಿತಿಯನ್ನು ಹೆಚ್ಚಿಸಬೇಕೆಂದು ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ತಂದಿದ್ದೇವೆ. ಈಗಾಗಲೇ ಇದು ಆಡ್ರ್ಯಾದೇಶದ ಮುಖಾಂತರ ಜಾರಿಯಲ್ಲಿದೆ. ಇದನ್ನು ಕಾನೂನು ಮಾಡುವುದಕ್ಕೋಸ್ಕರ ಈ ತಿದ್ದುಪಡಿ ವಿಧೇಯಕವನ್ನು ತರಲಾಗಿದೆ. ಪದೇಪದೇ ಸಮಯ ವಿಸ್ತರಣೆ ಮಾಡುತ್ತಿದ್ದೀರಿ, ಇದರಿಂದ ಎಷ್ಟು ಅನುಕೂಲ ಆಗಿದೆ ಅಥವಾ ಆಗುತ್ತಿಲ್ಲ ಎಂಬುದು ಗೊತ್ತಾಗುತ್ತಿಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನಮಗೂ ಅಷ್ಟೇ ಸಂದೇಹ ಇದೆ. ಹೋದ ಕಡೆ ಎಲ್ಲಾ ಕೇಳುತ್ತಾರೆ. ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರಿಗಾಗಲೀ, ಬೇರೆಯವರಿಗಾಗಲೀ, ಸಾರ್ವಜನಿಕ ಕ್ಷೇತ್ರದಲ್ಲಿ ಇರತಕ್ಕವರನ್ನೂ ನಾವು ಇನ್ನೂ ಅರ್ಜಿ ಹಾಕಲಿಲ್ಲ, ನಮಗೆ ಇನ್ನೂ ಅವಕಾಶ ಮಾಡಿಕೊಡಿ ಎಂದು ಜನ ಕೇಳುತ್ತಾರೆ. ನಾವೇ ಖುದ್ದಾಗಿ ಜಮೀನು ಮಾಡು ತ್ತಿದ್ದೇವೆ, ಆದರೆ ಕಾನೂನು ದೃಷ್ಟಿಯಿಂದ ನಮಗೆ ಬರುವುದಿಲ್ಲ, ನಮಗೆ ಅರ್ಜಿ ಹಾಕಲು ಅವಕಾಶ ಮಾಡಿಕೊಡಿ ಎಂದು ಕೇಳುತ್ತಾರೆ, ನೇರವಾಗಿ ಹೇಳುವುದಾದರೆ ಈ ಬಗ್ಗೆ ನಾವಿನ್ನೂ ಸಮೀಕ್ಷೆ ಮಾಡಿಲ್ಲ. ಸಾರ್ವಜನಿಕರಿಂದ ಬಂದಿರತಕ್ಕ ಮನವಿಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಸ್ತರಣೆ ಯನ್ನು ಜಾರಿಗೆ ತಂದಿದ್ದೇವೆ. ಮಾನ್ಯ ಖಾರ್ಗೆಯವರು ಫಾಲ್ಸ್ ಕ್ಲೈಮ್‌ಗಳು ಬರತಕ್ಕ ಸನ್ನಿವೇಶ ಗಳಿವೆ ಎಂದು ಹೇಳಿದರು. ನಾನು ಇಲ್ಲ ಎಂದು ಹೇಳುವುದಿಲ್ಲ. ಬರಬಹುದು. ಆದರೆ ಕಾನೂನು ಚೌಕಟ್ಟಿನಲ್ಲಿ inbuilt safeguards ಇಟ್ಟಿದ್ದೇವೆ, ರೆವಿನ್ಯೂ ಮಂತ್ರಿಯಾಗಿ ಕೆಲಸ ಮಾಡಿರುವ ಮಾನ್ಯ ಖಾರ್ಗೆಯವರಿಗೂ ಅದೂ ಗೊತ್ತಿದೆ. ಎಲ್ಲೂ ಗಮನದಲ್ಲಿಟ್ಟುಕೊಂಡು ನ್ಯಾಯವಾಗಿ ಯಾರಿಗೆ ಕನ್‌ಫರ್ಮೇಷನ್ ಆಫ್ ಆಕ್ಯುಪೆನ್ಸಿ ರೈಟ್ಸ್ ಸಿಗಬೇಕೋ ಅವರಿಗೆ ಅನುಕೂಲವಾಗಲಿ ಎಂದು ವಿಸ್ತರಣೆಗೆ ತಿದ್ದುಪಡಿಯನ್ನು ತಂದಿದ್ದೇವೆ. ಸನ್ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಪಬ್ಲಿಸಿಟಿ ಕೊಡಬೇಕು ಎಂದು ಹೇಳಿದ್ದಾರೆ. ಎಲ್ಲ ತಹಸೀಲ್ದಾರರ ಆಫೀಸಿನಲ್ಲಿ ಕೊಡುತ್ತಾರೆ. ಎಷ್ಟು ಹೇಳಿದರೂ ಕೂಡ ನಮ್ಮ ಕೈಯಲ್ಲಿ ಅರ್ಜಿ ಹಾಕುವುದಕ್ಕಾಗಲಿಲ್ಲ ಎಂದು ಮುತ್ತೆ ಜನ ಬರುತ್ತಾರೆ. ನಾನು ಕೊಳ್ಳೇಗಾಲಕ್ಕೆ ಹೋಗಿದ್ದೆ. ಸೊಂಡೂರಿಗೆ ಹೋಗಿದ್ದೆ. ಬಳ್ಳಾರಿಗೆ ಹೋಗಿದ್ದೆ. ರೆವಿನ್ಯೂ ಮಿನಿಸ್ಟರಾಗಿ ಹೋಗಿದ್ದಾಗ ಜನ ಬಂದು ಕೇಳಿದರು. ಹೀಗೆ ಸಂದರ್ಭಗಳು ಬರುತ್ತವೆ. ಯಾರಲ್ಲಿ ತಪ್ಪು ಕಂಡುಹಿಡಿಯುವುದು ? ಭೂಪತಿಯವರು ಸಮೀಕ್ಷೆ ಮಾಡಿ ಎಂದು ಹೇಳಿದರು. ಅದನ್ನು ಮಾಡುವುದಕ್ಕೆ ಹೋದರೆ ಅದೇ ದೊಡ್ಡ ಕೆಲಸವಾಗುತ್ತದೆ. ಮಾಡಬಾರದು ಎಂದಲ್ಲ. ಈ ಅವಧಿಯಲ್ಲಿ ಎಲ್ಲ ಅರ್ಜಿದಾರರು ಅರ್ಜಿ ಹಾಕುವುದಕ್ಕೆ ಸಾಧ್ಯವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ತೊಂದರೆಗಳು ಆಗದೇ ಇರುವ ರೀತಿಯಲ್ಲಿ ಎಚ್ಚರಿಕೆಯಿಂದ ಕೆಲಸ ಮಾಡಿ ಸಮಯ ವಿಸ್ತರಣೆಯನ್ನು ನ್ಯಾಯವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುವಂತೆ ಪ್ರಯತ್ನ ಮಾಡುತ್ತೇವೆ. ಜನರೂ ಕೂಡ ಈ ಸಮಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾರೆಂಬ ಆಸೆಯನ್ನು ವ್ಯಕ್ತಪಡಿಸಿ ಇದಕ್ಕೆ ಬೆಂಬಲ ನೀಡಿದ್ದಕ್ಕಾಗಿ ಸನ್ಮಾನ್ಯ ಸದಸ್ಯರಿಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಎಷ್ಟು ಜನರನ್ನು ಗುರುತು ಮಾಡಿದ್ದೀರಿ ? ಈ ರೀತಿಯ ಎಕ್ಸ್‌ಟೆನ್ಸನ್ ಮಾಡುವುದರಿಂದ ಎಷ್ಟು ಜನರಿಗೆ ಇದರಿಂದ ಅನುಕೂಲವಾಗಬಹುದು?

ಶ್ರೀ ಎ. ಲಕ್ಷ್ಮೀಸಾಗರ್ —ಆ ರೀತಿ ಇನ್ನೂ ಗುರುತು ಮಾಡಿಲ್ಲ.

೧-೩೦ ಪಿ.ಎಂ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸಾಮಾನ್ಯ ವಾಗಿ ಮಾತನಾಡುವುದಾದರೆ, ಒಟ್ಟು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ೮ ಲಕ್ಷದ ೪೮ ಸಾವಿರ ಟೆನೆಂಟ್ಸ್ ನಮ್ಮ ರಾಜ್ಯದಲ್ಲಿದ್ದಾರೆ ಎಂಬುದು ಒಂದು ಅಂದಾಜು ಇದೆ. ಅದೇ ರೀತಿ ಕರ್ನಾಟಕ

ಇನಾಂ ರದ್ದಿಯಾತಿ ಕಾನೂನು (ತಿದ್ದುಪಡಿ) ವಿಧೇಯಕದ ಕೆಳಗೆ ಸಂಡೂರಿಗೆ ಸೇರಿದಂತಹ ವಿಚಾರ ವಾಗಲಿ ಹಾಗೂ ಮೈಸೂರು ರಿಲೀಜಿಯಸ್ ಅಂಡ್ ಚಾರಿಟೆಬಲ್ ವಿಷಯದಲ್ಲಾಗಲೀ ಈ ರೀತಿಯಾಗಿ ಎಕ್ಸ್‌ಟೆನ್‌ಷನ್ ಮಾಡುವುದರಿಂದ ಎಷ್ಟು ಜನರಿಗೆ ಅನುಕೂಲವಾಗುತ್ತದೆ, ೨ ಸಾವಿರವೋ, ೪ ಸಾವಿರವೋ, ೪ ಸಾವಿರವೋ ಅಥವಾ ೧೦ ಸಾವಿರವೊ? ಆ ರೀತಿಯ ಅಂದಾಜು ಇದ್ದರೆ, ಆ ಏರಿಯಾದ ಜೂರಿಸ್ ಡಿಕ್ಷನ್‌ಗೆ ಬರುವಂತಹ ಅಸಿಸ್ಟೆಂಟ್ ಕಮೀಷನರ್ ಏನು ಇದ್ದಾರೆ, ಅವರು ಯಾವ ಯಾವ ಹಳ್ಳಿಗಳಲ್ಲಿ ಎಷ್ಟು ಎಷ್ಟು ಜನರನ್ನು ಗುರುತು ಮಾಡಿದ್ದಾರೆ ಎಂಬುದು ಗೊತ್ತಾಗಿದ್ದರೆ ಬೇಗೆ ಡಿಸ್‌ಪೋಸ್ ಮಾಡುವುದಕ್ಕೆ ಸಹಾಯಕವಾಗುತ್ತದೆ. ಅದನ್ನು ಬಿಟ್ಟು ಪ್ರತಿ ವರ್ಷವೂ ಈ ರೀತಿ ಎಕ್ಸ್‌ಟೆನ್ಷನ್ ಮಾಡುತ್ತಿರುವುದರಿಂದ ಪ್ರಯೋಜನ ಏನು? ಇದು ಮೂರನೆ ಸಲ ಇರಬೇಕು ಈ ರೀತಿ ಎಕ್ಸ್‌ಟೆನ್‌ಷನ್ ಮಾಡುತ್ತಿರುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಆ ರೀತಿಯ ಸಮೀಕ್ಷೆಯನ್ನು ಮಾಡಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಕೆಳಗೆ ೮ ಸಾವಿರ ಜನ ಅರ್ಜಿ ಹಾಕಿದ್ದಾರೆ. ಈ ವಿಚಾರದಲ್ಲಿ ಇನ್ನೂ ಆಗದೇ ಇರುವಂತಹದ್ದು. ಎಲ್ಲ ಕಡೆ ಹೋದಾಗ ಜನ ನಮ್ಮ ಹತ್ತಿರ ಬಂದು ನಾನು ಸ್ವಾಧೀನದಲ್ಲಿದ್ದೇನೆ. ಎಂಬುದಾಗಿ ಹೇಳುತ್ತಾರೆ. ಅರ್ಜಿ ಹಾಕಿದ್ದೀರ ಎಂಬುದಾಗಿ ಕೇಳಿದರೆ ಇನ್ನೂ ಹಾಕಿಲ್ಲ ಎಂಬುದಾಗಿ ಹೇಳುತ್ತಾರೆ. ಇದು ಹ್ಯೂಮನ್ ಪ್ರಾಬ್ಲಮ್.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಕರ್ನಾಟಕ ಇನಾಂ ರದ್ದಿಯಾತಿ ಕಾನೂನು (ತಿದ್ದುಪಡಿ) ವಿಧೇಯಕ ೧೯೮೭ನ್ನು ಪರ್ಯಾಲೋಚಿಸಿತು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು.—''ಖಂಡ ೨ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ರಿಂದ ೫ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭ರ ಕರ್ನಾಟಕ ಇನಾಂ ರದ್ದಿಯಾತಿ ಕಾನೂನು (ತಿದ್ದುಪಡಿ) ವಿಧೇಯಕ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ರ ಕರ್ನಾಟಕ ಇನಾಂ ರದ್ದಿಯಾತಿ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

''ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ ೧೯೮೭.''